# ಹರ್ಷಿತಾ ಗೌಡ: ಸಾಧನೆಯ ಹಾದಿ

ಪುರುಷರ ಪ್ರಾಬಲ್ಯದ ಕಾರು ರ್‍ಯಾಲಿಗಳಲ್ಲಿ ಈಗ ಮಹಿಳೆಯರೂ ತಮ್ಮ ಛಾಪು ಮೂಡಿಸುತ್ತಿದ್ದಾರೆ.

ಅದರಲ್ಲಿ ಕರ್ನಾಟಕದ ಹರ್ಷಿತಾ ಗೌಡ ಕೂಡ ಒಬ್ಬರು. ವಿಶೇಷವೆಂದರೆ ಅವರ ತಂದೆ ರಾಜಶೇಖರ ಗೌಡ ಅವರೇ ಮಗಳನ್ನು ರೇಸಿಂಗ್ ಪಟುವನ್ನಾಗಿ ರೂಪಿಸಿರುವುದು.

'ನಮ್ಮದು ಗೌಡರ ಮನೆತನ. ಮಗಳನ್ನು ಒಳ್ಳೆ ಹುಡುಗನಿಗೆ ಮದುವೆ ಮಾಡಿಕೊಡು ಎಂಬ ಒತ್ತಾಯ ಹಿರಿಯರಿಂದ ಇತ್ತು. ಆದರೆ, ಎಲ್ಲರ ಮಾತು ಮೀರಿ ಅವಳನ್ನು ಕಾರ್ ರೇಸಿಂಗ್ ಪಟುವನ್ನಾಗಿ ಸಿದ್ಧಗೊಳಿಸಿದ್ದೇನೆ. ನಾನು ಸಾಧಿಸಲು ಸಾಧ್ಯವಾಗದ್ದನ್ನು ನನ್ನ ಮಗಳು ಮಾಡುತ್ತಾಳೆ ಎನ್ನುವ ವಿಶ್ವಾಸ ಇದೆ' ಎಂದು ಬೆಂಗಳೂರಿನ ರಾಜಶೇಖರ್ ಗೌಡ ಹೇಳುತ್ತಾರೆ.

ರಾಜಶೇಖರ್ ಅವರು ಕೂಡ ಕಾರ್ ರೇಸ್ ಡ್ರೈವರ್ ಆಗಿದ್ದವರು. ಆದರೆ, ಎರಡು ಸಲ ಬೆನ್ನುಹುರಿ ಶಸ್ತ್ರಚಿಕಿತ್ಸೆ ಆಗಿದ್ದರಿಂದ ಕಣದಿಂದ ಹಿಂದೆ ಸರಿದರು. ಆದರೆ, ಪುತ್ರಿಗಾಗಿ ಮತ್ತೆ ಕಾರು ಹತ್ತಿದ್ದಾರೆ. ಹರ್ಷಿತಾ ಯಾವುದೇ ರೇಸ್‌ನಲ್ಲಿ ಭಾಗವಹಿಸಿದರೂ ಅವರೇ ಸಹಚಾಲಕ ಮತ್ತು ನೇವಿಗೇಟರ್. ಮಾರುತಿ ಬಲೆನೊ ಕಾರನ್ನು ಗುಡ್ಡಗಾಡಿನ ಹಾದಿಯಲ್ಲಿ ಶರವೇಗದಲ್ಲಿ ಚಾಲನೆ ಮಾಡುವ ನಿರ್ಭೀತ ಯುವತಿ ಹರ್ಷಿತಾ ಹತ್ತಾರು ಪ್ರಶಸ್ತಿಗಳನ್ನು ಗೆದ್ದಿದ್ದಾರೆ.

'ನನಗೆ ಚಿಕ್ಕವಳಾಗಿದ್ದಾಗಿನಿಂದಲೂ ಕಾರುಗಳ ಮೇಲೆ ಅಪಾರ ಪ್ರೀತಿ. 14 ವರ್ಷದವಳಿದ್ದಾಗಲೇ ಅಪ್ಪನಿಂದ ಚಾಲನೆ ಕಲಿತಿದ್ದೆ. ಆದರೆ, ರೇಸಿಂಗ್ ಆರಂಭಿಸಿದ್ದು 18 ವರ್ಷದ ನಂತರ. ಅಪ್ಪನೇ ನನಗೆ ಕೋಚ್, ನೇವಿಗೇಟರ್. ಆಟೋಕ್ರಾಸ್ ರೇಸ್‌ಗಳಲ್ಲಿ ಚಾಲನೆ ಮಾಡಿದ್ದೇನೆ. ಸುಮಾರು 80 ರೇಸ್‌ಗಳಲ್ಲಿ ಭಾಗವಹಿಸಿದ್ದೇನೆ. ಆದರೆ, ದಕ್ಷಿಣ್ ಡೇರ್ ನೀಡಿದ ಅನುಭವ ಅದ್ಭುತವಾದದ್ದು. ಅತ್ಯಂತ ಸವಾಲಿನ ಕಠಿಣ ಹಾದಿ ಇದಾಗಿತ್ತು. ಅಪ್ಪ ನನಗೆ ನೇವಿಗೇಟರ್ ಆಗಿರುವುದು ಒಂದು ರೀತಿಯ ಅನುಕೂಲ. ಅವರು ಪಕ್ಕದಲ್ಲಿ ಇರುವುದು ನನಗೆ ಸ್ಫೂರ್ತಿ. ಆದರೆ, ತಪ್ಪು ಮಾಡಿದಾಗ, ವೇಗ ಕಡಿಮೆಯಾದಾಗ ಅವರ ಕೋಪ ನೆತ್ತಿಗೇರಿ ರೇಗಾಡುತ್ತಾರೆ' ಎಂದು ಹರ್ಷಿತಾ ತಮ್ಮ ತಂದೆಯ ಮೇಲಿನ ಅಭಿಮಾನ ವ್ಯಕ್ತಪಡಿಸುತ್ತಾರೆ.



2013ರಲ್ಲಿ ಅವರು ಮೊದಲ ಬಾರಿಗೆ ಕೊಯಮತ್ತೂರ್ ಮೂಲಕ ತಮ್ಮ ಅಭಿಯಾನ ಆರಂಭಿಸಿದರು. ಅತ್ಯಂತ ಕಿರಿಯ ವಯಸ್ಸಿನ ಡ್ರೈವರ್ ಅವರಾಗಿದ್ದರು. ಚಿಕ್ಕಮಗಳೂರು ರ್‍ಯಾಲಿಯಲ್ಲಿಯೂ ಅವರು ಕಿರಿಯ ಡ್ರೈವರ್ ಪ್ರಶಸ್ತಿ ಗಳಿಸಿದ್ದರು. ಎಫ್‌ಎಂಎಸ್‌ಸಿಐ ಭರವಸೆಯ ಡ್ರೈವರ್– 2013, ಡಿಎನ್‌ಎಫ್ ರ್‍ಯಾಲಿ ಕೊಯಮತ್ತೂರ್ (2013, 2014), ಡಿಎನ್‌ಎಫ್ ಚೆನ್ನೈ ರ್‍ಯಾಲಿ (2014), 2011ರಲ್ಲಿ ಆಟೋಕ್ರಾಸ್ ಪೋಡಿಯಂ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

21 ವರ್ಷ ವಯಸ್ಸಿನ ಹರ್ಷಿತಾ ಗೌಡ ಎಂತಹ ಕೆಟ್ಟ ರಸ್ತೆಯಲ್ಲಿಯೂ ಪ್ರತಿ ಗಂಟೆಗೆ 100 ರಿಂದ 140 ಕಿಲೋಮೀಟರ್ ವೇಗದಲ್ಲಿ ಕಾರು ಚಾಲನೆ ಮಾಡಬಲ್ಲರು.

ಸ್ಪರ್ಧೆಗಳು ನಡೆಯುತ್ತವೆ. ವರ್ಷದ ಎಲ್ಲ ಋತುಗಳಲ್ಲಿಯೂ ಒಂದಿಲ್ಲೊಂದು ಸ್ಪರ್ಧೆಗಳಿಗೆ ಕರ್ನಾಟಕ ವೇದಿಕೆಯಾಗುತ್ತದೆ. ಆಟೋಮೊಬೈಲ್ ಉದ್ಯಮಗಳು ಇರುವ ಬೆಂಗಳೂರು ಈ ಎಲ್ಲ ರೇಸ್‌ಗಳಿಗೂ ಒಂದು ರೀತಿಯಲ್ಲಿ ರಾಜಧಾನಿಯೇ ಸರಿ.

'ಉತ್ತರ ಭಾರತದಲ್ಲಿ ಹಿಮಾಲಯನ್ ರ್‍ಯಾಲಿ ಬಿಟ್ಟರೆ ದೊಡ್ಡ ಸ್ಪರ್ಧೆಗಳು ನಡೆಯುವುದಿಲ್ಲ. ಆದರೆ, ಕರ್ನಾಟಕದಲ್ಲಿ ಹತ್ತಾರು ಕ್ಲಬ್‌ಗಳಿವೆ. ಜೆ.ಕೆ. ಟೈರ್, ಚಿಕ್ಕಮಗಳೂರು, ಗೋಣಿಕೊಪ್ಪದಲ್ಲಿ ದಸರಾ ರೇಸ್, ಕಾಫಿನಾಡು ರೇಸ್, ಮಾರುತಿ ಸುಜುಕಿ ದಕ್ಷಿಣ ಡೇರ್ ರೇಸ್‌ಗಳು ನಡೆಯುತ್ತವೆ. ಕೇರಳ, ಕೊಯಿಮತ್ತೂರುಗಳಲ್ಲಿ ಆಟೋಕ್ರಾಸ್ ಮತ್ತು ಆಫ್‌ರೋಡ್ ರ್‍ಯಾಲಿಗಳು ನಡೆಯುತ್ತವೆ. ಇದರಿಂದಾಗಿ ಇವೆಲ್ಲವುಗಳಿಗೆ ಬೆಂಗಳೂರು ಕೇಂದ್ರಬಿಂದು. ಇದು ರಾಜ್ಯದ ಮೋಟೊಕ್ರಾಸ್ ಕ್ರೀಡೆಯ ಬೆಳವಣಿಗೆಗೆ ಸಹಕಾರಿಯಾಗಿದೆ' ಎಂದು ಆಟೋಕ್ರಾಸ್ ಚಾಂಪಿಯನ್ ಡೇನ್ ತಿಮ್ಮಯ್ಯ ಹೇಳುತ್ತಾರೆ.

ಕಳೆದ 12 ವರ್ಷಗಳಿಂದ ಈ ಸಾಹಸ ಕ್ರೀಡೆಯಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ ಮೈಸೂರಿನ ಡೇನ್ ತಿಮ್ಮಯ್ಯ.

ದಶಕದ ಹಿಂದೆ ಜಗತ್ ನಂಜಪ್ಪ, ಸಾಗರ್ ಮುತ್ತಣ್ಣ, ಚಿಣ್ಣಪ್ಪ, ಮೈಸೂರಿನ ಕೆ. ಪ್ರಸಾದ್ ಅವರು ಕರ್ನಾಟಕದ ಕಾರ್ ರೇಸ್ ತಾರೆಗಳಾಗಿದ್ದರು. ಅವರ ಪ್ರೇರಣೆಯಿಂದ ಮತ್ತಷ್ಟು ಯುವ ಚಾಲಕರು ಕಣಕ್ಕಿಳಿದರು. ಅವರಲ್ಲಿ ಡೇನ್ ಕೂಡ ಒಬ್ಬರು.

ದುಬಾರಿ ಮತ್ತು ಅಪಾಯಕಾರಿ ಕ್ರೀಡೆ ಇದಾಗಿದ್ದರೂ ರೇಸ್‌ಪಟುಗಳ ಆಕರ್ಷಣೆ ಮಾತ್ರ ಕಡಿಮೆಯಾಗಿಲ್ಲ. ದ ಫೆಡರೇಷನ್ ಆಫ್ ಮೋಟಾರ್ ಸ್ಪೋರ್ಟ್ಸ್ ಕ್ಲಬ್ಸ್ ಆಫ್ ಇಂಡಿಯಾ (ಎಫ್‌ಎಂಎಸ್‌ಸಿಐ) ದಿಂದ ಮಾನ್ಯತೆ ಪಡೆದ ಹತ್ತಕ್ಕೂ ಹೆಚ್ಚು ಕ್ಲಬ್‌ಗಳು ಕರ್ನಾಟಕದಲ್ಲಿವೆ. ಬೆಂಗಳೂರು, ಮಂಗಳೂರು, ಚಿಕ್ಕಮಗಳೂರು, ಮೈಸೂರುಗಳಲ್ಲಿ ಈ ಕ್ಲಬ್‌ಗಳು ಕಾರ್ಯನಿರ್ವಹಿಸುತ್ತಿವೆ.

### ಪ್ರಾಯೋಜಕತ್ವದ ಕೊರತೆ

ಈ ಕ್ರೀಡೆಯಲ್ಲಿ ಅಭ್ಯಾಸ ಮತ್ತು ನಿರ್ವಹಣೆ ಎರಡೂ ದುಬಾರಿ. ಸ್ಪರ್ಧಾತ್ಮಕ ಕಾರು ನಿರ್ವಹಣೆ ಮಾಡುವುದು ಬಹುತೇಕ ಆನೆ ಸಾಕಿದಂತೆಯೇ ಲೆಕ್ಕ. ಆದ್ದರಿಂದ ದೊಡ್ಡ ಕಂಪೆನಿಗಳ ಪ್ರಾಯೋಜಕತ್ವ ಅವಶ್ಯಕ. ಆದರೆ, ನಿರೀಕ್ಷಿತ ಪ್ರಮಾಣದಲ್ಲಿ ಪ್ರಾಯೋಜಕ ಕಂಪೆನಿಗಳು ಈ ಕ್ರೀಡೆಯತ್ತ ಒಲವು ತೋರುತ್ತಿಲ್ಲ ಎನ್ನುವ ಕೊರಗು ಸ್ಪರ್ಧಿಗಳಿಗೆ ಇದೆ.

'ಈ ಕ್ರೀಡೆಯನ್ನು ಆಯ್ಕೆ ಮಾಡಿಕೊಳ್ಳುವ ಯುವಕ ಅಥವಾ ಯುವತಿ ತಮ್ಮ ಜೀವದ ಹಂಗು ತೊರೆದು ಸ್ಪರ್ಧೆಗಿಳಿಯುತ್ತಾರೆ. ವ್ಯಯಿಸಿದ ಹಣವೂ ಮರಳಿ ಬರುವುದಿಲ್ಲ. ಉದ್ಯೋಗ, ಜೀವನ ಭದ್ರತೆಗಳೂ ಇಲ್ಲ. ಇದರಿಂದ ತಮ್ಮ ಮಕ್ಕಳನ್ನು ಈ ಕ್ರೀಡೆಗೆ ಕಳಿಸಲು ಪಾಲಕರು ಹಿಂದೇಟು ಹಾಕುವುದು ಸಹಜ. ಅದರಿಂದಾಗಿಯೇ ಕೇವಲ ಶ್ರೀಮಂತರು ಮಾತ್ರ ಭಾಗವಹಿಸುವಂತಾಗಿದೆ.ಎಫ್‌ಎಂಎಸ್‌ಸಿಐ ಈ ಬಗ್ಗೆ ಏನಾದರೂ ದಿಟ್ಟ ಕ್ರಮ ತೆಗೆದುಕೊಳ್ಳಬೇಕು. ಪ್ರಾಯೋಜಕರನ್ನು ಆಕರ್ಷಿಸಬೇಕು. ಮಾಧ್ಯಮಗಳಲ್ಲಿ ಹೆಚ್ಚು ಪ್ರಚಾರವಾಗಬೇಕು' ಎಂದು ಡೇನ್ ತಿಮ್ಮಯ್ಯ ಹೇಳುತ್ತಾರೆ.

ಕೊರತೆಗಳ ನಡುವೆಯೂ ಉತ್ಸಾಹಿ ರೇಸ್ ಚಾಲಕರು ಕಣಕ್ಕಿಳಿಯುತ್ತಿದ್ದಾರೆ. ಮಂಗಳೂರಿನ ಡೀನ್ ಮಸ್ಕರೇನಸ್, ಕೊಡಗಿನ ಬೋಪಯ್ಯ, ಮೈಸೂರಿನ ಲೋಹಿತ್ ಅರಸ್, ಬೆಂಗಳೂರಿನ ಯುವತಿ ಹರ್ಷಿತಾ ಗೌಡ, ಅಶ್ವಿನ್ ನಾಯಕ ಮತ್ತಿತರರು ಸದ್ಯ ಮಿಂಚುತ್ತಿರುವ ಪ್ರತಿಭಾನ್ವಿತರಾಗಿದ್ದಾರೆ.

ಯುರೋಪ್ ದೇಶಗಳಲ್ಲಿ ಕಾರು ಉತ್ಪಾದನಾ ಕಂಪೆನಿಗಳೇ ತಂಡಗಳನ್ನು ಕಟ್ಟಿ ಬೆಳೆಸುತ್ತವೆ. ಸ್ಪರ್ಧಿಗಳನ್ನು ಉದ್ಯೋಗಿಗಳನ್ನಾಗಿ ನೇಮಕ ಮಾಡಿಕೊಂಡು ತರಬೇತಿ, ಸಂಬಳ, ಸೌಲಭ್ಯಗಳನ್ನು ನೀಡುತ್ತವೆ. ಅಂತಹ ವ್ಯವಸ್ಥೆ ಇಲ್ಲಿಯೂ ನಿರ್ಮಾಣವಾಗಬೇಕು. ಆಗಲೇ ಈ ಕ್ರೀಡೆಗೆ ಉಜ್ವಲ ಭವಿಷ್ಯ ಲಭಿಸುವುದು ಖಚಿತ.